## ಶುಭಾಂಶು ಮೆಂತೆ ಸೊಪ್ಪು!



ಸೊಪ್ಪಿನ ಜಯಮ್ಮನಿಂದ ಬೀದಿಯಲ್ಲಿ 'ಶುಭಾಂಶು ಮೆಂತೆ ಸೊಪ್ಪು'ಎಂದು ಕೂಗೋದು ಕೇಳಿತು.

ವಿಚಾರಿಸಿದಾಗ 'ಅಪ್ಪಟ ಸಾವಯವ, ಭೂಮಿಯಲ್ಲಿ ಬಿತ್ತಿದ್ದಲ್ಲ, ಆಗಸದಲ್ಲಿ ಬಿತ್ತಿದ್ದು!. ಶುಭಾಂಶು ಶುಕ್ಲಾ ವಿಜ್ಞಾನಿ ಬಿತ್ತಿದ್ದು, ಮಾಮೂಲಿ ರೇಟೇ ಹೆಚ್ಚೇನಿಲ್ಲ, ಯಾಕಂದ್ರೆ ಸಾಗಾಟ ವೆಚ್ಚ ಇಲ್ಲವೇ ಇಲ್ಲ. ಮೇಲಿಂದ ಪಿಂಡಿ ಕಟ್ಟಿ ಹಾಕಿದ್ರೆ, ಇಲ್ಲಿಗ್ ಬಂದ್ ಬೀಳುತ್ತೆ! ತುಂಬಾ ಸತ್ವ ಭರಿತ, ಅಲ್ಲಿನ ಮಣ್ಣು ಇನ್ನೂ ರಾಸಾಯನಿಕದಿಂದ ಕೆಟ್ಟೋಗಿಲ್ಲ. ಅಪ್ಪಟ ಜವಾರಿ,ತಿಂದು ನೋಡಿ, ನಾಳೆ ಮತ್ತೆ ಹುಡಿಕ್ಕೊಂಡ್ ಬತ್ತೀರ ಎಷ್ಟು ಕೊಡ್ಲಿ?' ಜಯಮ್ಮ ಒಂದೇ ಉಸಿರಿನಲ್ಲಿ ಉಲಿದಳು.

'ನಿಂಗೆ ಹೇಗ್ ಇದೆಲ್ಲಾ ಗೊತ್ತಾಯ್ತು ಜಯಮ್ಮ?' ಎಂದು ಕೇಳಿದೆ. 'ಅಯ್ಯೋ ಸಾಮಿ, ಟಿ.ವಿ ನೋಡಿ ಬರೀ ಅದೇ ಬತ್ತದೆ. ಮೆಂತೆ ಮಾತ್ರ ಬೇಗ ಕೊಯ್ಲಿಗೆ ಬಂದೈತೆ, ಮುಂದೆ ಹರಿವೆ,ಕೊತ್ತಂಬ್ರಿ, ಪಾಲಕ್ಕು, ಸಬ್ಬಸಿಗೆ ಎಲ್ಲಾ ಮೇಲಿಂದಾನೇ ಬತ್ತದೆ!' ಎನ್ನಬೇಕೆ?. ಜಯಮ್ಮನ ವರ್ತಮಾನದ ಅಪ್ಡೇಟ್, ತನ್ನ ವ್ಯಾಪಾರಿ ಚಮತ್ಕಾರಕ್ಕೆ ಥಳಕು ಹಾಕಿದ್ದು ಅಚ್ಚರಿ ಮೂಡಿಸಿತು.

**ನಗರ ಗುರುದೇವ್ ಭಂಡಾರ್ಕರ್**

---

## ನನಗೇ ಮದುವೆ!

ಪ್ರೊ. ಗೋವಿಂದ ರೆಡ್ಡಿಯವರು ನಿವೃತ್ತಿ ಹೊಂದಿ, ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ತಮ್ಮ ಮಗನ ಜೊತೆಯಲ್ಲಿ ನಮ್ಮ ಬೀದಿಯಲ್ಲೇ ವಾಸವಾಗಿದ್ದರು.

ಮದುವೆಗೆ ಹುಡುಗಿ ಬೇಕೆಂದು ಯಾರಾದರೂ ಇದ್ದರೆ ಹೇಳಿ, ಎಂದು ಯಾವಾಗಲೂ ಕೇಳುತ್ತಿದ್ದರು. ನಮಗೆ ಪರಿಚಯವಿದ್ದ ಹುಡುಗಿಯ ಫೋಟೊ ಜಾತಕದೊಂದಿಗೆ ಹುಡುಗಿಯ ತಂದೆಯನ್ನು ಕರೆದುಕೊಂಡು ರೆಡ್ಡಿ ಮನೆಗೆ ಹೋದೆವು. ಕಾಫಿ, ತಿಂಡಿ ಉಪಚಾರದ ನಂತರ ಹುಡುಗನನ್ನು (ಅವರ ಮಗನನ್ನು) ತೋರಿಸಲು ಕೇಳಿದೆವು. ರೆಡ್ಡಿಯವರು ಅರ್ಥವಾಗದೆ ಪೆಚ್ಚಾದವರಂತೆ, 'ನನಗೇ ಹುಡುಗಿ ತೋರಿಸಲು ಕೇಳಿದ್ದು, ನನ್ನ ಹೆಂಡತಿ ತೀರಿ ಹೋಗಿದ್ದಾಳೆ. ಇನ್ನೊಂದು ಮದುವೆ ಮಾಡಿಕೊಳ್ಳೋಣ ಅಂತ' ಎಂದು ಬೋಳು ತಲೆಯ



ಕಲೆ: ಗಣೇಶ ಆಚಾರ್ಯ

ಮೇಲೆ ಕೈ ಆಡಿಸುತ್ತಾ ಜೋತು ಬಿದ್ದ ಬಾಯಿಗೆ ಕಟ್ಟಿಸಿದ ಹಲ್ಲನ್ನು ಹ್ಹಿ ಹ್ಹಿ ಎಂದು ಕಿರಿದರು. ಆಗ ಬೇಸ್ತು ಬೀಳುವ ಸರದಿ ನಮ್ಮದಾಗಿತ್ತು.

**ಅನಸೂಯಾ ತ್ರಿವಿಕ್ರಮ್**